


ತಿಲೋತ್ತಮನಾದ ದುರ್ಯೋಧನನನ್ನು ಮೊದಲುಗೊಂಡು ಎಲ್ಲ ರಾಜಾಧಿರಾಜರನ್ನೂ ದ್ರೌಪದಿಗೆ ಪರಿಚಯಿಸುತ್ತಾನೆ. ಆದರೆ, ದ್ರೌಪದಿ ಅವರಲ್ಲಿ ಯಾರನ್ನೂ ಇಷ್ಟಪಡುವುದಿಲ್ಲ. ಬಹುಶಃ ಅವರೆಲ್ಲರೂ ಆ ವೇಳೆಗಾಗಲೇ ವಿವಾಹಿತರಾಗಿ ಬಹುವಲ್ಲಭರಾಗಿದ್ದದ್ದು ಕಾರಣವಿದ್ದೀತು. ಆದರೆ, ಪ್ರಕರಣ ಅಲ್ಲಿಗೆ ನಿಲ್ಲುವುದಿಲ್ಲ. ಆಕಾಂಕ್ಷಿಗಳಿಗೆ ಮತ್ಸ್ಯಯಂತ್ರಭೇದನದ ಪಣ ಒಡ್ಡಲಾಗುತ್ತದೆ. ಬ್ರಾಹ್ಮಣನ ಮಾರುವೇಷದಲ್ಲಿದ್ದ ಅರ್ಜುನ ಪಣ ಗೆಲ್ಲುತ್ತಾನೆ. ದ್ರೌಪದಿಯ ಸಖಿಯರು, “ನಿನಗಿನ್ನು ನೀರುಮಜ್ಜಿಗೆಯೇ ಗತಿ” ಎಂದು ಗೇಲಿ ಮಾಡುತ್ತಾರೆ. ಜೊತೆಗೆ ಅತ್ತೆ ಕುಂತಿಯ ದೂ(ದು)ರಾಲೋಚನೆಯ